ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಯಾತ್ರಿಕರಿಗೆ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ನಾನು ಕೊಟ್ಟಿರತಕ್ಕಂಥ ವಿಷಯವೇ ಬೇರೆ, ಇಲ್ಲಿ ನನಗೆ ಕೊಟ್ಟಿರತಕ್ಕಂಥ ಉತ್ತರವೇ ಬೇರೆ.

ಅಧ್ಯಕ್ಷರು.—ಮೊದಲು ತಾವು ಗಮನ ಸೆಳೆಯಿರಿ ಆಮೇಲೆ ನೋಡೋಣ.

ಶ್ರೀ ಡಿ. ಟಿ. ಜಯಕುಮಾರ್.—ನಾನು ಕೇಳಿರುವುದು ನಂಜನಗೂಡು ದೊಡ ಪಟ್ಟಣ ಆದು ದೊಡ್ಡ ಯಾತ್ರಾ ಸ್ಥಳವಾಗಿದೆ, ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಕೇಳಿದ್ದೇನೆ.....

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಕೇಳುವುದನ್ನು ನೋಡಿದರೆ ನಾನು ಆ ಪ್ರಶ್ನೆಯನ್ನು ಸರಿಯಾಗಿ ತಿಳಿದುಕೊಂಡಿಲ್ಲ ಎನ್ನುವ ಅರ್ಥ ಬರುತ್ತದೆ. ಮೊದಲು ಅವರು ಗಮನ ಸೆಳೆಯಲಿ. ಅವರು ಕೇಳಿದ ಪ್ರಶ್ನೆಗಳಿಗೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ತಾವು ಮೊದಲು ಅವರ ಗಮನವನ್ನು ಸೆಳೆಯಿರಿ.

ಶ್ರೀ. ಡಿ. ಟಿ. ಜಯಕುಮಾರ್ ನಂಜನಗೂಡು ಪಟ್ಟಣದ ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಯಾತ್ರಿಕರಿಗೆ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ನಗರಾಭಿವೃದ್ಧಿ ಖಾತೆ ಮಂತ್ರಿ).—ಮಾನ್ಯ ಅಧ್ಯಕ್ಷರೆ, ಈ ದೇವಸ್ಥಾನಕ್ಕೆ ಬರತಕ್ಕಂಥ ಯಾತ್ರಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡತಕ್ಕಂಥ ಜವಾಬ್ದಾರಿ ದೇವಸ್ಥಾನಕ್ಕೆ ಸೇರಿದ್ದು. ಇದರ ಬಗ್ಗೆ ನಾನು ಹೇಳುವುದೇನೆಂದರೆ ಈಗ ನಂಜನಗೂಡು ಪಟ್ಟಣದಲ್ಲಿ ಕುಡಿಯುವ ನೀರಿನ ಅಭಾವವಿರುವುದಿಲ್ಲ. ನಂಜನಗೂಡು ದೇವಾಲಯದ ಧರ್ಮಾಧಿಕಾರಿಗಳು ನಂಜನಗೂಡು ಪುರಸಭಾ ಅಧಿಕಾರಿಗಳನ್ನು ಸಂಪರ್ಕಿಸಿದರೆ ಹಾಗೂ ದತ್ತಿ ಇಲಾಖೆಯು ಇದಕ್ಕೆ ಅಗತ್ಯವಿರುವ ಹಣವನ್ನು ಪೂರೈಸಿದರೆ ಸದರಿ ಪುರಸಭೆಯು ಯಾತ್ರಿಕರಿಗೆ ಅಗತ್ಯವಿರುವ ನೀರು ಸರಬರಾಜು ವ್ಯವಸ್ಥೆಯನ್ನು ಮಾಡುತ್ತದೆ. ಅವರು ಹಣವನ್ನು ಕೇಳಿದೆ ಬಾವಿಗಳನ್ನು ಮಾಡಿಸಿ ಅವರಿಗೆ ಸೌಲಭ್ಯಗಳನ್ನು ಮಾಡಿಕೊಡುವುದಾದರೆ ಆದಕ್ಕೆ ನನ್ನ ಆಭ್ಯಂತರವೇನೂ ಇಲ್ಲ. ಆದರೆ ಅಲ್ಲಿನ ಪುರಸಭೆಯವರು ಅಲ್ಲಿಗೆ ಬರತಕ್ಕಂಥ ಯಾತ್ರಿಕರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿ ಕೊಡತಕ್ಕದ್ದು ಅವರ ಜವಾಬ್ದಾರಿಯಾಗಿದೆ ಹಾಗೂ ಅವರ ಕರ್ತವ್ಯವಾಗಿದೆ.

ಶ್ರೀ ಡಿ.ಟಿ. ಜಯಕುಮಾರ್.—ಆ ದೇವಸ್ಥಾನಕ್ಕೆ ಬರುವ ಯಾತ್ರಿಕರಿಗೆ ಮಾತ್ರ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು ಎನ್ನುವುದಾದರೆ ಆದನ್ನು ನಾನೇ ಮಾಡಿಸಿಕೊಡುತ್ತೇನೆ. ನಾನು ಮಾನ್ಯ ಸಚಿವರ ಗಮನವನ್ನು ಸೆಳೆದ ಉದ್ದೇಶ ಏನೆಂದರೆ ನಂಜನಗೂಡು ದೊಡ್ಡ ಪಟ್ಟಣ, ಆದು ಒಂದು ದೊಡ್ಡ ಯಾತ್ರಾಸ್ಥಳ, ಆ ದೇವಸ್ಥಾನಕ್ಕೆ ೫೦ ಸಾವಿರ ಜನಗಳು ಹೋಗಿ ಬರುತ್ತಾರೆ. ನನಗೆ ತಿಳಿದು ಬಂದಿರುವ ಹಾಗೆ ಇವೊತ್ತು ಆಲ್ಲಿ ನೀರಿನ ಸೌಕರ್ಯ ಹೇಗೆ ಇದೆ ಎಂದರೆ ರಾತ್ರಿ ೧೨ ಗಂಟೆಗೋ, ೩ ಗಂಟೆಗೋ ೪ ಗಂಟೆಗೋ ಒಂದು ಸರದಿ ಪ್ರಕಾರ ಅವರಿಗೆ ನೀರು ಕೊಡುತ್ತಾ ಇದ್ದಾರೆ. ಆದು ಸಾಕಾಗುವುದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಿ ಈ ಕುಡಿಯುವ ನೀರಿನ ವ್ಯವಸ್ಥೆಗೆ ಒಂದು ಹೊಸ ಯೋಜನೆಯನ್ನು ತಯಾರು ಮಾಡಿ ೨೪ ಗಂಟೆಗಳೂ ಕೂಡ ಆ ಪಟ್ಟಣದಲ್ಲಿ ಕುಡಿಯುವ ನೀರು ಸಿಗುವ ಹಾಗೆ ವ್ಯವಸ್ಥೆ ಮಾಡುತ್ತೀರಾ? ತಮಗೆ ಗೊತ್ತಿದೆ ಅಲ್ಲಿ ಕಬಿನಿ ನದಿಯ ನೀರು ಯಾವಾಗಲೂ ಹರಿಯುತ್ತಾ ಇದೆ. ಈ ದೃಷ್ಟಿಯಿಂದ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದೆ. ಈ ಬಗ್ಗೆ ಒಂದು ಹೊಸ ಯೋಜನೆ ತಯಾರು ಮಾಡಿ ೨೪ ಗಂಟೆಯೂ ಅಲ್ಲಿ ನೀರು ಬರುವ ಹಾಗೆ ಮಾಡಬೇಕು, ಈ ಒಂದು ಯೋಜನೆಗೆ ತಾವು ಮಂಜೂರಾತಿ ನೀಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಸದಸ್ಯರಿಗೂ ಗೊತ್ತಿದೆ. ಈ ಬಂದು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಅಲ್ಲಿನ ಸ್ಥಳೀಯ ಪುರಸಭೆಯವರು ಗಮನಹರಿಸಿ ತಮ್ಮ ಮನೋಭಾವವನ್ನು ಕರ್ನಾಟಕ ನೀರು ಸರಬರಾಜು ಮಂಡಲಿಗೆ ತಿಳಿಸುವಂತೆ ಅವರಿಗೆ ಮನವಿಯನ್ನು ಕಳುಹಿಸಬೇಕು. ಜೊತೆಗೆ ಅವರು ತಮ್ಮ ಪಂಪಿಗೆಯನ್ನು ಕೊಡುವುದಕ್ಕೆ ಸಿದ್ಧರಾಗಿರಬೇಕು. ಆನಂತರ ಅದರ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಾಗಿದ್ದೇನೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಈ ಪಟ್ಟಣಕ್ಕೆ ಕುಡಿಯುವ ನೀರಿನ ಬಗ್ಗೆ ಒಂದು ಹೊಸ ಯೋಜನೆಯನ್ನು ತಯಾರು ಮಾಡಿ ೧೯೮೬-೮೭ಕ್ಕೆ ಆ ಯೋಜನೆಯನ್ನು ಸೇರಿಸಿಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಮುಂದಿನ ಗಮನ ಸೆಳೆಯುವ ಸೂಚನೆಯನ್ನು ನಿಯಮ ೩೫೪ರ ಪ್ರಕಾರ ಬಂದಿರುವ ಸೂಚನೆಗಳನ್ನು ತೆಗೆದುಕೊಂಡ ನಂತರ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಬಹುದು.

ನಿಯಮ ೩೫೪ರ ಮೇರೆಗೆ

(೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಲ ಕೊರೆತಕ್ಕೆ ತಡೆಗೋಡೆ ರಚಿಸುವುದು

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ದಕ್ಷಿಣಕನ್ನಡ ಜಿಲ್ಲೆಯು ಕರಾವಳಿಯಾದ್ದಕ್ಕೂ ಕಡಲ ಕೊರೆತ, ಪ್ರವಾಹದ ಹಾನಿ, ಅನೇಕ ವರ್ಷಗಳಿಂದ ನಡೆದಿದ್ದು, ತಡೆಗೋಡೆ ರಚಿಸಬೇಕೆಂಬ ಜನತೆಯ ಕೂಗು ಕಡಲ ಕೊರೆತದಂತೆ ಅವಿಶ್ರಾಂತವಾಗಿ ಕೇಳುತ್ತಿದ್ದರೂ, ಆ ಆಕ್ರಂದನಕ್ಕೆ ಕರ್ನಾಟಕ ಸರ್ಕಾರ ಇನ್ನೂ ಎಚ್ಚೆತ್ತಿಲ್ಲ. ಕೊರೆತ ತೀವ್ರವಾದಲ್ಲಿ ಒಂದಿಷ್ಟು ಕಲ್ಲು ಸುರಿದು ತಾತ್ಕಾಲಿಕ ಉಪಶಮನ ಮಾಡಲಾಗುತ್ತದೆ. ಮುಂದಿನ ವರ್ಷ ಬಂದಾಗ ಆ ಕಲ್ಲೆಲ್ಲ ಪುನಃ ಕಡಲ ಪಾಲು. ಪುನಃ ಕಡಲ ಕೊರೆತ. ಪುನಃ ಜನತೆಯ ಆಕ್ರಂದನ. ಶಾಶ್ವತ ರಕ್ಷಣಾ ವ್ಯವಸ್ಥೆ ಮಾಡುವೆವೆಂದ ಸರ್ಕಾರದ ಭರವಸೆಯೂ ಕಡಲ ಪಾಲಾಯಿತೇ? ಸತ್ಯಕ್ಕೆ ದೂರವಾದ ಪೊಳ್ಳು ಭರವಸೆಗಳಿಂದ ಜನ ರೊಚ್ಚಿಗೆದ್ದು ಕರಾವಳಿಯುದ್ದಕ್ಕೂ ಜಿಲ್ಲಾ ಪರಿಷತ್ ನಂಡಲ ಪಂಚಾಯತ್ ಚುನಾವಣೆಗಳಲ್ಲಿ ಸ್ಪಷ್ಟ ಸೂಚನೆ ನೀಡಿದ್ದಾರೆ. ಇನ್ನಾದರೂ ಕಾರ್ಯಪ್ರವೃತ್ತರಾಗಿ ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಮಂತ್ರಿಗಳಿಂದ ವರದಿ ತರಿಸಿ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಬಿ.ಎ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಈ ರೀತಿ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟು ನಮ್ಮ ಸೂಚನೆಗಳಿಗೆ ಇನ್ನೂ ಉತ್ತರ ಕಳುಹಿಸಿಕೊಟ್ಟಿಲ್ಲ.

ಅಧ್ಯಕ್ಷರು.—ಅವರು ಉತ್ತರ ತರಿಸಿಕೊಡುತ್ತಾರೆ.

ಶ್ರೀ ಬಿ.ಎ. ಇದಿನಬ್ಬ.—ಯಾವಾಗ ತರಿಸಿಕೊಡುತ್ತಾರೆ?

ಅಧ್ಯಕ್ಷರು.—ಇದಕ್ಕಾಗಿಯೇ ಒಂದು ಭರವಸೆಗಳ ಸಮಿತಿ ಇದೆ. ಆ ಸಮಿತಿಯಲ್ಲಿ ಎಲ್ಲಾ ಪಕ್ಷಗಳ ಸದಸ್ಯರು ಇರುತ್ತಾರೆ. ಶ್ರೀಮತಿ ಲೀಲಾದೇವಿ ಅವರೇ ಅವರ ಅಧ್ಯಕ್ಷರು. ಆ ಸಮಿತಿಯವರು ವಾರದಲ್ಲಿ ಎರಡು ದಿನ ಸಭೆ ಸೇರಿ ಇಂಥಾದ್ದನ್ನೆಲ್ಲಾ ಪರಿಶೀಲಿಸಿ ನೋಡಿ ಮುಂದಿನ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಯು. ಭೂಪತಿ.—ಉತ್ತರ ತರಿಸಿಕೊಡುತ್ತೇನೆಂದು ಹೇಳಿದರೆ, ಅದು ಭರವಸೆ ಆಗುವುದಿಲ್ಲ.

ಅಧ್ಯಕ್ಷರು.—"due consideration, it will be looked into" ಇದೆಲ್ಲಾ ಭರವಸೆ ಆಗುತ್ತದೆ.

ಶ್ರೀ ಯು. ಭೂಪತಿ.—ಆದರೆ 'ಕಳುಹಿಸಿಕೊಡುತ್ತೇನೆ' ಎಂದರೆ ಭರವಸೆ ಆಗುವುದಿಲ್ಲ.

ಅಧ್ಯಕ್ಷರು.—ಈ ಬಗ್ಗೆ ನಿಮ್ಮೆಲ್ಲರ ಪರವಾಗಿ ನಾನೇ ನೋಡುತ್ತೇನೆ.